
# ಎರಡು ವಿಶಿಷ್ಟ ಕಥನ ಪ್ರಯೋಗಗಳು

ದೇವದತ್ತ ಪಟ್ಟನಾಯಕರಂತೆ ಕಥನಕಲೆ ಹಾಗೂ ಚಿತ್ರಕಲೆಗಳೆರಡನ್ನೂ ಕರಗತ ಮಾಡಿಕೊಂಡಿರುವ ಬರಹಗಾರರು ಯಾವುದೇ ಭಾಷೆಯಲ್ಲಿ ಅಪರೂಪ. ಪುರಾಣ ಕಥನಗಳನ್ನು ಹೊಸ ತಲೆಮಾರಿಗೆ ಅತ್ಯಂತ ಸೃಜನಶೀಲವಾಗಿ ತಲುಪಿಸುವಲ್ಲಿ ಅವರು ತಮ್ಮದೇ ಆದ ಶೈಲಿಯೊಂದನ್ನು ರೂಢಿಸಿಕೊಂಡಿದ್ದಾರೆ. ಪದ್ಮರಾಜ ದಂಡಾವತಿ ಅವರು ಕನ್ನಡಕ್ಕೆ ತಂದಿದ್ದ 'ಸೀತಾ' ಕೃತಿಯ ಮೂಲಕ ಕನ್ನಡದ ಓದುಗರಿಗೆ ಪಟ್ಟನಾಯಕರು ಪರಿಚಯಗೊಂಡಿದ್ದರು; ಆ ಕೃತಿ ಅನುವಾದಕರಿಗೆ ಅತ್ಯುತ್ತಮ ಅನುವಾದಗಳಿಗೆ ನೀಡುವ 'ಕೇಂದ್ರ ಸಾಹಿತ್ಯ ಅಕಾಡೆಮಿ' ಪ್ರಶಸ್ತಿಯನ್ನೂ ತಂದುಕೊಟ್ಟಿತ್ತು. ಇದೀಗ 'ರಾಮಾಯಣ ಮಹಾಭಾರತ: ಮುಖಾಮುಖಿ, ಕೌತುಕದ ತುಲನೆ' ಹಾಗೂ 'ಜೈನಧರ್ಮ: 63 ಒಳನೋಟಗಳು' ಪುಸ್ತಕಗಳ ಅನುವಾದದ ಮೂಲಕ ಪಟ್ಟನಾಯಕರು ಹಾಗೂ ಪದ್ಮರಾಜರ ಜುಗಲಬಂದಿ ಮುಂದುವರೆದಿದೆ.




'ರಾಮಾಯಣ ಮಹಾಭಾರತ: ಮುಖಾಮುಖಿ, ಕೌತುಕದ ತುಲನೆ' ಶೀರ್ಷಿಕೆಯೇ ಕೃತಿಯ ಹೂರಣವನ್ನು ಕಾಣಿಸುವಂತಿದೆ. ಭಾರತೀಯರನ್ನು ಗಾಢವಾಗಿ ಪ್ರಭಾವಿಸಿರುವ ಹಾಗೂ ಅವರ ಭಾವಕೋಶದ ಭಾಗವಾಗಿರುವ ಎರಡೂ ಕೃತಿಗಳಲ್ಲಿನ ಕಥನಗಳಲ್ಲಿನ ಸಾದೃಶ್ಯವನ್ನು ಪಟ್ಟನಾಯಕರು ಗುರ್ತಿಸಿ ವಿಶ್ಲೇಷಿಸಿದ್ದಾರೆ. 'ಕಥಾ ನಿರೂಪಣೆ', 'ಕುಟುಂಬ', 'ಒಡಕು', 'ವನವಾಸ', 'ಯುದ್ಧ', 'ಯುದ್ಧಾನಂತರ', 'ಮರುಕಥನ' ಹಾಗೂ 'ವಿವೇಕ' ಎನ್ನುವ ಎಂಟು ಭಾಗಗಳಲ್ಲಿ ಅಡಕಗೊಂಡಿರುವ ಐವತ್ತಾರು ಶೀರ್ಷಿಕೆಗಳಲ್ಲಿ ಈ ಕೌತುಕದ ತುಲನೆ ಅನಾವರಣಗೊಂಡಿದೆ.

ಎರಡು ಪುರಾಣಕಾವ್ಯಗಳನ್ನು ಒಟ್ಟಂದದಲ್ಲಿ ನೋಡುವ ಪಟ್ಟನಾಯಕರ ಕ್ರಮ ಅಕಡೆಮಿಕ್ ನೆಲೆಗಟ್ಟಿನದಾಗಿರದೆ, ಸೃಜನಶೀಲ ಲೇಖಕನೊಬ್ಬನ ಪ್ರತಿಭಾವಿಲಾಸದಲ್ಲಿ ರೂಪುಗೊಂಡಿರುವುದಾಗಿದೆ. ಅರಿವು ಹಾಗೂ ಹೊಳಹು ಎರಡರ ಬೀಜರೂಪದಂತೆ ಅವರ ಬರವಣಿಗೆಯಿದೆ. ಈ ತೌಲನಿಕ ಕಥನಗಳ ಮಥನ, ಎರಡೂ ಮಹಾಕಾವ್ಯಗಳಲ್ಲಿನ ಸಾದೃಶ್ಯಗಳನ್ನು ಸಹೃದಯರ ಗಮನಕ್ಕೆ ತರಲು ಪ್ರಯತ್ನಿಸುವಂತೆಯೇ, ರಾಮಾಯಣ–ಮಹಾ ಭಾರತಗಳ ಸಂಕ್ಷಿಪ್ತ ಕಥನವನ್ನೂ ಓದುಗರಿಗೆ ದಾಟಿಸುತ್ತದೆ. ಭಾರತದ ಬೃಹತ್ ಪುರಾಣಕೋಶಗಳಲ್ಲಿ ಆಸಕ್ತಿ ತಳೆಯಲು ಹೊಸ ತಲೆಮಾರಿನ ಓದುಗರನ್ನು ಪಟ್ಟನಾಯಕರ ಬರವಣಿಗೆ ಪ್ರೇರೇಪಿಸುವಂತಿದೆ.

'ರಾಮಾಯಣ ಮಹಾಭಾರತ ಮುಖಾಮುಖಿ' ಗಿಂತಲೂ ಹೆಚ್ಚು ಸವಾಲಿನ ಬರವಣಿಗೆ 'ಜೈನಧರ್ಮ: 63 ಒಳನೋಟಗಳು' ಕೃತಿಯದು. ಓದಿನ ಸ್ವಾರಸ್ಯದ ದೃಷ್ಟಿಯಿಂದ ಪಟ್ಟನಾಯಕರ ಉಳಿದ ಕೃತಿಗಳಷ್ಟು 'ಜೈನಧರ್ಮ' ಆಕರ್ಷಕ ಎನ್ನಿಸುವುದಿಲ್ಲವಾದರೂ, ಬರಹಗಾರ ತನ್ನಷ್ಟಕ್ಕೆ ಒಡ್ಡಿಕೊಳ್ಳಬಹುದಾದ ಸವಾಲಿನ ರೂಪದಲ್ಲಿ ಮುಖ್ಯವಾದ ಬರವಣಿಗೆಯಿದು. ಧರ್ಮಕ್ಕೆ ಸಂಬಂಧಿಸಿದ ಬರವಣಿಗೆಯನ್ನು ಜೀವವಿರೋಧಿ ಅಥವಾ ಸೃಜನಶೀಲತೆಯ ಕೊರತೆಯ ರೂಪದಲ್ಲಿ ನೋಡಬಹುದಾದ ಉದಾಹರಣೆಗಳೇ ಹೆಚ್ಚಾಗಿರುವ